ವಿಜಯಮ್ಮ ಒಳ ಹೋದಾಗ ಸೂರ್ಯನ ನೋಟ, ಸಂಕೋಚದಿಂದ ಉಣ್ಣುತ್ತಿದ್ದ ಅಪೂರ್ವಳತ್ತ ಹರಿದಿತ್ತು. 'ನಿನ್ನ ಅದೃಷ್ಟವೇ ಸರಿ. ಹಿಂದೆ ಮುಂದೆ ಯಾರೂ ಗತಿ ಇಲ್ದೇ ಹೋದ್ರೂ ಇಂಥ ಮನೇಲಿ ಇದ್ದುಕೊಂಡು ಇದನ್ನೆಲ್ಲಾ ಅನುಭವಿಸ್ತಾ ಮಜಾ ಮಾಡ್ತಿದ್ಯಾ. ನನ್ನ ಅಪ್ಪನಿಗೆ ಸ್ವಂತ ಮಗ ಬೇಡ; ಗತಿ ಇಲ್ದೇ ಇರೋರನ್ನು ತಂದು ಮನೇಲಿಟ್ಕೋತಾರೆ. ಮನೆ ಮಗನನ್ನು ಹೊರಗೆ ಹಾಕ್ತಾರೆ..' ಅವನ ದನಿಯಲ್ಲಿ ತನ್ನ ಬಗ್ಗೆ ಇದ್ದ ತಿರಸ್ಕಾರ, ವ್ಯಂಗ್ಯ ಅಪೂರ್ವಳ ಹೃದಯವನ್ನು ಇರಿದಿತ್ತು. ಅವನು ತನ್ನ ಬಗ್ಗೆ ಹೀಗೆ ಗತಿ ಇಲ್ಲದವಳೆಂದು ನಿಕೃಷ್ಟವಾಗಿ ಆಡಿಕೊಳ್ಳುವುದನ್ನು ಸಹಿಸಿಕೊಳ್ಳಲಾರದೇ ಮನಸ್ಸು ನೊಂದು ಕಂಗಳಲ್ಲಿ ನೀರಾಡಿತು. ಮತ್ತೆ ಒಂದು ತುತ್ತು ತಿನ್ನಲು ಅವಳಿಂದ ಸಾಧ್ಯವಾಗಲಿಲ್ಲ.

ಸೂರ್ಯ ಆ ಮನೆಯಲ್ಲೇ ಉಳಿದರೆ, ತನಗೆ ಅಲ್ಲಿ ದಿನ ಕಳೆಯುವುದು ದುಸ್ತರವಾಗಬಹುದೆಂಬ ಸತ್ಯ ಆಗಲೇ ಅವಳಿಗೆ ಮನವರಿಕೆಯಾಗಿತ್ತು. ತಟ್ಟೆಯನ್ನೆತ್ತಿಕೊಂಡು ಏನೂ ಆಡದೆ ಅಲ್ಲಿಂದ ಎದ್ದು ಹೋದಳು. ಸೂರ್ಯನ ಸಿಟ್ಟು, ರೋಷದ ಹಿನ್ನೆಲೆ ಅವಳಿಗೆ ಅರ್ಥವಾಗಿತ್ತು. ಮನೆ ಮಗನಾಗಿ ತನಗೆ ದೊರಕದ ಪ್ರೀತಿ, ಸ್ಥಾನಮಾನಗಳು ದಿಕ್ಕಿಲ್ಲದ ತನಗೆ ದೊರಕುತ್ತಿರುವುದು ಸಹಜವಾಗಿಯೇ ಅವನ ದ್ವೇಷಕ್ಕೆ ಕಾರಣವಾಗಿತ್ತು. ರಾಯರ ಸ್ವಭಾವವನ್ನು ಅವಳು ಈ ಮೂರೂವರೆ ವರ್ಷಗಳಲ್ಲಿ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಳು. ಮಿಲಿಟರಿಯಲ್ಲಿದ್ದ ಅವರು ಸದಾ ನ್ಯಾಯ, ನಿಷ್ಠೆ, ಸಮಾಜದ ಏಳಿಗೆ, ಶಿಸ್ತು ಎಂದು ತುಡಿಯುವ ಆದರ್ಶ ವ್ಯಕ್ತಿಯಾಗಿದ್ದರು. ಅಂಥ ವ್ಯಕ್ತಿ ಯಾವುದೋ ಬಲವಾದ ಕಾರಣಕ್ಕೆ ತಮ್ಮ ಮಗನನ್ನು ತ್ಯಜಿಸಿರಬೇಕು ಎಂದು ಅಪೂರ್ವ ಅರ್ಥ ಮಾಡಿಕೊಂಡಿದ್ದಳು.

ಹೊರಗೆ ಪೂರ್ತಿ ಕತ್ತಲಾವರಿಸಿದ್ದು, ಅಪೂರ್ವ ಪಾತ್ರೆಗಳನ್ನೆಲ್ಲಾ ಶುಚಿ ಮಾಡಲು ವಿಜಯಮ್ಮನಿಗೆ ಸಹಕರಿಸಿದರೆ , ಸೂರ್ಯ ಟಿವಿ ನೋಡುವುದರಲ್ಲಿ ಮಗ್ನನಾಗಿದ್ದ.

'ಎಷ್ಟೋ ವರ್ಷಗಳ ನಂತರ ನನ್ಮಗ ಇವತ್ತು ಹೊಟ್ಟೆ ತುಂಬಾ ಊಟ ಮಾಡಿದ.. ನನಗೆ ತುಂಬಾ ಸಂತೃಪ್ತಿ ಆಯ್ತು ನೋಡು..' ಎಂದರು ಪ್ರಸನ್ನತೆಯಿಂದ.

ಅಷ್ಟರಲ್ಲಿ ಕಾಲಿಂಗ್ ಬೆಲ್ ಸದ್ದಾಯಿತು, 'ನಿನ್ನ ಅಂಕಲ್ ಬಂದ್ರೂಂತ ಕಾಣುತ್ತೆ. ಹೋಗಿ ಬಾಗಿಲು ತೆಗೆದು ನೋಡ್ತೀಯಾ..ಯಾರೂಂತ? ಇಷ್ಟು ಹೊತ್ತಿಗೆ ಬೇರೆ ಯಾರು ಬರ್ತಾರೆ..?'

ಅಪೂರ್ವ ತಾನೇ ಬಾಗಿಲು ತೆಗೆಯಲು ಹೋದಳು. ಬಾಗಿಲು ತೆರೆಯುತ್ತಲೇ ಅಲ್ಲಿ ಕಂಡ ಖಾಕಿ ಸಮವಸ್ತ್ರಧಾರಿಗಳನ್ನು ಕಂಡು ಅವಳು ಅಧೀರಳಾದಳು.

'ಒಳಗೆ ಬರಬಹುದಾ..?' ಎನ್ನುತ್ತಲೇ ಆ ಎಸ್.ಐ. ಮತ್ತು ಇಬ್ಬರು ಪೇದೆಗಳು ನೇರವಾಗಿ ಒಳಗೆ ನುಗ್ಗಿದ್ದರು. ಹೊರ ಬಂದ ವಿಜಯಮ್ಮನಿಗೆ, ಮನೆಯೊಳಗೆ ಬಂದ ಪೋಲಿಸರನ್ನು ಕಂಡು ದಿಗಿಲುಗೊಂಡರು.

'ಅಪೂರ್ವ, ಯಾರೇ ಇದು..ಇಲ್ಲಿ ಯಾಕೆ ಬಂದಿದ್ದಾರೆ..?' ಕಂಪಿಸುವ ಸ್ವರದಲ್ಲಿ ಪ್ರಶ್ನಿಸಿದರು. ಇಬ್ಬರು ಪೇದೆಗಳು ಆಗಲೇ ಸೂರ್ಯನ ಇಬ್ಬದಿಯಲ್ಲಿ ನಿಂತು ಅವನ ತೋಳುಗಳನ್ನು ಬಳಸಿ ನಿಂತಿದ್ದರು.

'ನಾನು ಇದೇ ಹಲಸೂರು ಏರಿಯಾದ ಇನ್ಸ್‌ಪೆಕ್ಟರ್ ಮನೇಲಿ ಬೇರೆ ಗಂಡಸರು ಯಾರಾದ್ರೂ ಇದ್ದಾರಾ? ಪ್ರಭಾಕರರಾಯರು ಎಲ್ಲಿ?'

'ಅವ್ರು ಹೊರಗಡೆ ಹೋಗಿದ್ದಾರೆ ಸಾರ್..ನನ್ಮಗನನ್ನು ಯಾಕೆ ಹಾಗೆ ಹಿಡಿದು ನಿಂತಿದ್ದೀರಾ? ಏನಾಯ್ತು ಸಾರ್?'

## ಟವರು

ಇಂದಿನ ಹೆಣ್ಣು ಮಕ್ಕಳಿಗೆ
ದೂರವಿದ್ದರೂ ಪರವಾಗಿಲ್ಲ
ತವರು
ಹತ್ತಿರ ಇರಲೇಬೇಕು
ಮೊಬೈಲ್‌ನ ಟವರು!

★ ಸು.ವಿಜಯಲಕ್ಷ್ಮಿ, ಶಿವಮೊಗ್ಗ



ವಿಜಯ

'ಎರಡು ದಿನಗಳ ಹಿಂದೆ ಇದೇ ಏರಿಯಾದ ಮನೆಯೊಂದರಲ್ಲಿ ಕಳ್ಳತನವಾಗಿದೆ. ಕಳ್ಳನನ್ನು ಗುರುತಿಸಲಾಗಿದೆ.ಅವ್ನ ಜೊತೆ ಈ ಹುಡ್ಗ ಕೂಡಾ ಶಾಮೀಲಾಗಿದ್ದಾನೆ ಅನ್ನುವ ಗುಮಾನಿ..ವಿಚಾರಣೆ ಮಾಡ್ಲಿಕ್ಕೆ ಕರ್ಕೊಂಡು ಹೋಗ್ತಾ ಇದ್ದೀವಿ'.

'ನನ್ಮಗ ಅಂಥವನಲ್ಲ ಸಾರ್. ಅವ್ನನ್ನ ಬಿಟ್ಟು ಬಿಡಿ. ಎಷ್ಟೋ ವರ್ಷಗಳ ನಂತರ ನನ್ಮಗ ನಮ್ಗೆ ಸಿಕ್ಕಿದ್ದಾನೆ. ಅವ್ನು ಅಂಥ ತಪ್ಪು ಮಾಡಿಲ್ಲ'

'ಅವ್ನು ಈ ಕಳ್ಳತನ ಮಾಡಿದ ರೌಡಿ ಗೋಪಿ ಜೊತೆ ಓಡಾಡಿಕೊಂಡಿದ್ದ.. ಬೇಕಾದ್ರೆ ನೀವೇ ವಿಚಾರಿಸಿ' ಎಂದವರು ಸೂರ್ಯನ ಕಡೆಗೆ ತಿರುಗಿ,'ರೌಡಿ ಗೋಪಿ ನಿನ್ನ ಸ್ನೇಹಿತ ಹೌದೋ ಅಲ್ವೋ? ಸ್ವಲ್ಪ ಹೊತ್ತಿನ ಮೊದಲು ನಿನ್ಗೆ ಫೋನ್ ಮಾಡಿದ್ನೋ ಇಲ್ವೋ? ನೀವಿಬ್ರೂ ಒಂದೇ ಕೋಣೆಯಲ್ಲಿ ವಾಸಿಸ್ತಿದ್ರಲ್ವಾ?'

ಸೂರ್ಯ ತಲೆಯಾಡಿಸುತ್ತ,'ಗೆಳೆಯ ಹೌದು ಸರ್..ಆದ್ರೆ ಈ ಕಳ್ಳತನಕ್ಕೂ ನನ್ಗೂ ಯಾವ ಸಂಬಂಧನೂ ಇಲ್ಲ'

'ನಿನ್ಮಾತು ನಿಜಾನಾ ಸುಳ್ಳಾ ಅಂತ ..ಸ್ಟೇಶನ್‌ಗೆ ಹೋದ್ಮೇಲೆ ವಿಚಾರಿಸ್ತೀವಿ.. ಈಗ ನಡೀ..' ವಿಜಯಮ್ಮ ಅಂಗಲಾಚಿದರೂ ಅವರು ಕಿವಿಗೆ ಹಾಕಿಕೊಳ್ಳದೇ ತಾವು ಬಂದ ಜೀಪಿನಲ್ಲಿ ಸೂರ್ಯನನ್ನು ಹತ್ತಿಸಿಕೊಂಡು ಕರೆದೊಯ್ದರು. ವಿಜಯಮ್ಮನ ಸಂಭ್ರಮವೆಲ್ಲಾ ನೀರ ಮೇಲಣ ಗುಳ್ಳೆಯಂತೆ ಕ್ಷಣಮಾತ್ರದಲ್ಲಿ ಒಡೆದು ಹೋಗಿತ್ತು.

'ಇವ್ರು ಮನೇಲಿಲ್ಲ. ಈಗೇನು ಮಾಡೋದು? ನಾವು ಸ್ಟೇಶನ್‌ಗೆ ಹೋಗಿ ವಿಚಾರಿಸೋಣ. ನಡೀ..ಇಷ್ಟು ಸಮಯದ ನಂತರ ಸಿಕ್ಕಿದ ಮಗನನ್ನು ನಾನು ಪುನಃ ಕಳೆದುಕೊಳ್ಳಲು ಸಿದ್ಧಳಿಲ್ಲ. ಅಲ್ಲೇನು ನಡೀತಿದೆ ಅಂತ ತಿಳ್ಕೊಂಡು ಆಮೇಲೆ ನಿನ್ನ ಅಂಕಲ್‌ಗೆ ತಿಳಿಸೋಣ. ಬೇಗ ತಗೋ' ಎಂದು ನಿಂತ ಕಾಲಲ್ಲೇ ಹೊರಟು ಬಿಟ್ಟರು. ಗೊಂದಲದ ಗೂಡಾಗಿದ್ದ ಮನಸ್ಸನ್ನು ಹೊತ್ತು ಅಪೂರ್ವ ಅವರೊಂದಿಗೆ ಪೋಲಿಸ್ ಸ್ಟೇಶನ್‌ಗೆ ಹೊರಡಲು ಸಿದ್ಧಳಾದಳು. ಆ ರೌಡಿ ಗೋಪಿಗೂ ಸೂರ್ಯನಿಗೂ ಹೇಗೆ ಪರಿಚಯ? ಎಲ್ಲೋ ಕಳ್ಳತನವಾದರೆ ಪೋಲಿಸರು ಬಂದು ಸೂರ್ಯನನ್ನು ಏಕೆ ಕರೆದೊಯ್ಯಬೇಕು? ಸೂರ್ಯ ಮನೆಗೆ ಬಂದಿದ್ದ ಎಂಬ ಮಾಹಿತಿ ಪೋಲಿಸರಿಗೆ ಹೇಗೆ ತಿಳಿಯಿತು?

ಆಟೋ ಹಿಡಿದು ಹಲಸೂರು ಠಾಣೆಯನ್ನು ತಲುಪಿ ನೋಡಿದಾಗ ಸೂರ್ಯನನ್ನು ಸೆಲ್ ಒಳಗೆ ಹಾಕಿದ್ದರು. ಸೂರ್ಯನನ್ನು ಆ ಸ್ಥಿತಿಯಲ್ಲಿ ಕಂಡು ವಿಜಯಮ್ಮನ ಹೆತ್ತೊಡಲು ಚುರುಗುಟ್ಟಿತು.

'ಸಾರ್..ಅವ್ನು ಅಂಥವನಲ್ಲ. ಬಿಟ್ಟುಬಿಡಿ ಸಾರ್. ನಿಮ್ಗೆಲ್ಲೋ ಅಪಾರ್ಥ ಆಗಿರಬೇಕು. ನನ್ಮಗ ಅಂಥವನಲ್ಲ..' ಆ ಇನ್ಸ್‌ಪೆಕ್ಟರ್ ಮುಂದೆ ವಿಜಯಮ್ಮ ಗೋಗರೆದರು.

'ನೀವು ಈ ಹೊತ್ತಿಗೆ ಇಲ್ಲ್ಯಾಕೆ ಬರೋದಿಕ್ಕೆ ಹೋದ್ರಿ..? ನೀವು ಈಗ ಮನೇಗೆ ಹೊರಡಿ.. ನಾಳೆ ಬೆಳಿಗ್ಗೆ ಬನ್ನಿ...ಮಾತನಾಡೋಣ' ಎಂದರು.

'ನನ್ಮಗನನ್ನು ಇಂಥ ಸ್ಥಿತಿಯಲ್ಲಿ ಬಿಟ್ಟು ನಾನು ಹೇಗೆ ಮನೇಲಿ ನೆಮ್ಮದಿಯಿಂದ ಇರಲಿ ಹೇಳಿ ಸರ್? ನನ್ಮಗ ಅಂಥವನಲ್ಲ. ಅವ್ನು ಕಳ್ಳತನ ಮಾಡಿಲ್ಲ ಸರ್..' ಎಂದು ಪ್ರಲಾಪಿಸಿದರು.

'ಕೊಲೆ ಮಾಡಿ ಇಷ್ಟು ವರ್ಷಗಳ ಕಾಲ ಜೈಲಿನಲ್ಲಿ ಇದ್ದವನು. ಕಳ್ಳತನ ಮಾಡಿಲ್ಲ ಅಂತ ಹೇಗಮ್ಮ ಹೇಳ್ತೀರಾ? ಅದೂ ಅಲ್ದೇ ಈ ರೌಡಿ ಗೋಪಿ ಜೊತೇನೇ ವಾಸವಾಗಿದ್ದ. ಆ ಗೋಪಿ ಕಳ್ಳತನದಲ್ಲಿ ಕುಖ್ಯಾತಿ ಪಡೆದವ್ನು.' ಇನ್ಸ್‌ಪೆಕ್ಟರ್‌ನ ಮಾತುಗಳು ವಿಜಯಮ್ಮನ ಬಾಯನ್ನು ಮುಚ್ಚಿಸಿದರೆ, ಅಪೂರ್ವ ನಿಶ್ಚೇಷ್ಟಿತಳಾಗಿ ನಿಂತು ಬಿಟ್ಟಳು. ಸೂರ್ಯ ಕೊಲೆ ಮಾಡಿ ಜೈಲಿನಲ್ಲಿದ್ದ..!''

**ಅಧ್ಯಾಯ 5**

ಅಪೂರ್ವಳ ಮನದಲ್ಲಿ ಕೊರೆಯುತ್ತಿದ್ದ ಎಲ್ಲಾ ಪ್ರಶ್ನೆಗಳಿಗೆ ಈಗ ಉತ್ತರ ದೊರಕಿತ್ತು. ಸೂರ್ಯ ಯಾವುದೋ ಕೊಲೆ ಮಾಡಿ ಜೈಲಿಗೆ ಹೋಗಿ ಬಂದ ಕಾರಣಕ್ಕೆ ರಾಯರು ಆತನನ್ನು ಮನೆಯೊಳಗೆ ಸೇರಿಸಿಕೊಳ್ಳುತ್ತಿಲ್ಲ! ಮನೆಯಿಂದ ದೂರ ಉಳಿಯಲು ಇದು ಕಾರಣ.

ಸೂರ್ಯ ಸಮಾಜಘಾತುಕ ವ್ಯಕ್ತಿ. ಜೈಲಿನಲ್ಲಿದ್ದ ಕಾರಣ ಅವನ ವೇಷ ಭೂಷಣ ಹಾಗಿದೆ..! ಅವನು ಒರಟಾಗಿ, ಅನಾಗರಿಕನಂತೆ ವರ್ತಿಸುತ್ತಾನೆ. ವಿಜಯಮ್ಮನ ನಿತ್ಯದ ಸಂಕಟಕ್ಕೆ ಇದೇ ಕಾರಣ! ವಿಜಯಮ್ಮನಿಗೆ, ಮಗನನ್ನು ಹೋಗಿ ನೋಡಿಕೊಂಡು ಬರಲು ರಾಯರು ಅವಕಾಶ ನೀಡದ ಕಾರಣ, ಆ